**<u>ಸಾಕ್ಷಿಯನ್ನು ದಿನಾಂಕ 09-06-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ.ಬಿ ವಕೀಲರಿಂದಃ</u>**

1. ವೈಯಕ್ತಿಕವಾಗಿ ನಾನು ನ್ಯಾಯಾಲಯದಲ್ಲಿ 2 ದಾವೆ ದಾಖಲಿಸಿದ್ದೆನೆ. ಸಾಕ್ಷಿ ಪುನಃ ಸದರಿ ದಾವೆಗಳು ರಾಜಿಯಾುಗಿದೆ ಎನ್ನುತ್ತಾರೆ. ನನಗೆ ಸಂಬಂಧಪಟ್ಟ ಯಾವುದೇ ದಾವೆ ಈಗ ಚಾಲ್ತಿಯಲ್ಲಿಲ್ಲ ಎನ್ನುತ್ತಾರೆ. ವಾದಿ ಪರವಾಗಿ ಎಷ್ಟು ದಾವೆಗಳಲ್ಲಿ ಸಾಕ್ಷಿ ಹೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇದೊಂದೆ ದಾವೆಯಲ್ಲಿ ಸಾಕ್ಷಿ ಹೇಳುತ್ತಿದ್ದೇನೆ ಎನ್ನುತ್ತಾರೆ. ಅಫ್ರೋಜ್ ಸಾಬ್ ಎಂಬುವವರ ವಿರುದ್ಧ ವಾದಿ ದಾಖಲಿಸಿದ್ದ ಅಸಲು ದಾವೆ ಸಂಖ್ಯೆ 392/2022 ರ ದಾವೆಯಲ್ಲಿ ನಾನು ವಾದಿಯ ಪರವಾಗಿ ಸಾಕ್ಷಿ ಹೇಳಿದ್ದೇನೆ ಎಂದರೆ ಸಾಕ್ಷಿ ಮರೆತು ಹೋಗಿದೆ ಎನ್ನುತ್ತಾರೆ. ಇನ್ನೂ 2–3 ದಾವೆಯಲ್ಲಿ ವಾದಿಯ ಪರವಾಗಿ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ರಾಜಿಯಾಗಿದೆ ಎಂದು ನಾನು ಹೇಳಿದ ನನ್ನ ವೈಯಕ್ತಿಕ ದಾವೆಗಳನ್ನು ನಾನು ಹಣ ವಸೂಲಾತಿಗಾಗಿ ದಾಖಲಿಸಿದ್ದೆ.

2. ನಾನು ಮತ್ತು ವಾದಿ ಲೇವಾದೇವಿ ವ್ಯವಹಾರ ಮಾಡುತ್ತೇವೆ ಎಂದರೆ ಸಾಕ್ಷಿ ವಾದಿಯ ಬಗ್ಗೆ ನನಗೆ ಗೊತ್ತಿಲ್ಲ ಆದರೆ ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ ಎನ್ನುತ್ತಾರೆ. ನಾವಿಬ್ಬರು ಲೇವಾದೇವಿ ವ್ಯವಹಾರ ಮಾಡುವುದರಿಂದ ಒಬ್ಬರ ಪರವಾಗಿ ಮತ್ತೊಬ್ಬರು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುತ್ತೇವೆ ಎಂದರೆ ಸರಿಯಲ್ಲ.

3. ನನ್ನ ಮುಖ್ಯ ವಿಚಾರಣೆ ಸಲುವಾಗಿ ನಾನು ನ್ಯಾಯಾಲಯಕ್ಕೆ ಬಂದ ದಿನ ಮೊದಲ ಬಾರಿಗೆ ಪ್ರತಿವಾದಿಯನ್ನು ನೋಡಿದ್ದೇನೆ ಮತ್ತು ಅದಕ್ಕೂ ಮೊದಲು ನಾನು ಆತನನ್ನು ನೋಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಹಣ ಕೊಡುವಾಗ ನೋಡಿದ್ದೇನೆ ಎನ್ನುತ್ತಾರೆ. ವಾದಿ-ಪ್ರತಿವಾದಿ ನಡುವೆ ಏನು ವ್ಯವಹಾರ ಆಯಿತು ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಪುನಃ ನನ್ನ ಸ್ನೇಹಿತನಾದ ವಾದಿ, ಪ್ರತಿವಾದಿಗೆ ಹಣ ಕೊಡುವಾಗ ನಾನು ಹಾಜರಿದ್ದೆ ಎನ್ನುತ್ತಾರೆ. ಪ್ರತಿವಾದಿಗೆ ಹಣ ಕೊಟ್ಟಿದ್ದೇನೆ ಎಂದು ವಾದಿಯೇ ನನಗೆ ಹೇಳಿದ್ದಾರೆ ಎಂದರೆ ಸರಿ. ಹಣ ಕೊಡುವುದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ವಾದಿ ನನ್ನ ಸ್ನೇಹಿತನಾಗಿರುವುದರಿಂದ ಆತ ಪ್ರತಿವಾದಿಗೆ ರೂ.4 ಲಕ್ಷ ಸಾಲ ಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಪ್ರತಿವಾದಿಗೆ ಸಾಲ ಕೊಡುವಾಗ ವಾದಿಯ ಜೊತೆ ನಾನು ಮತ್ತು ಪತ್ರಬರಹಗಾರ ರಾಘವೇಂದ್ರ ಇದ್ದೆವು. ನನ್ನ ವ್ಯವಹಾರದಲ್ಲಿ ಬಳಸಲಾಗುವ ಪ್ರೊನೋಟ್ ದಾಖಲೆಗಳನ್ನು ಸಹ ರಾಘವೇಂದ್ರ ರವರೇ ಬರೆಯುತ್ತಾರೆ ಎಂದರೆ ಸರಿ. ಪ್ರೊನೋಟ್ ದಾಖಲೆಗಳನ್ನು ಕೊಟ್ಟರೆ ನಾನು ಮತ್ತು ವಾದಿ ಹೇಳಿದಂತೆ ರಾಘವೇಂದ್ರ ತುಂಬಿಕೊಡುತ್ತಾರೆ ಎಂದರೆ ಸರಿಯಲ್ಲ. ನಾನು, ರಾಘವೇಂದ್ರ ಮತ್ತು ವಾದಿ ಸೇರಿ ನಿ.ಪಿ.-1 ಮತ್ತು 2 ರ ದಾಖಲೆಗಳನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ.

5. ನಿ.ಪಿ.-1 ಮತ್ತು 2 ರ ದಾಖಲೆಗಳನ್ನು ತಾಲ್ಲೂಕು ಕಛೇರಿ ಆವರಣದಲ್ಲಿ

ಬರೆಯಲಾಯಿತು. ಸದರಿ ದಾಖಲೆಯ ಒಕ್ಕಣಿಕೆಯನ್ನು ವಾದಿಯೇ ಬರೆಸಿದ್ದಾರೆ ಎಂದರೆ ಸಾಕ್ಷಿ ಹಣ ಕೊಟ್ಟ ನಂತರ ವಾದಿ ಸದರಿ ದಾಖಲೆಗಳನ್ನು ಬರೆಸಿದರು ಎನ್ನುತ್ತಾರೆ. ಪ್ರತಿವಾದಿ ಅವಿದ್ಯಾವಂತ ಎನ್ನುವುದು ನನಗೆ ಗೊತ್ತಿಲ್ಲ. ತಿಂಗಳಿಗೆ 1 1/2 ರೂಪಾಯಿ ಬಡ್ಡಿ ಆಧಾರದಲ್ಲಿ ವಾದಿ, ಪ್ರತಿವಾದಿಗೆ ಸಾಲ ಕೊಟ್ಟಿದ್ದಾರೆ.

6. ವಾದಿ ಇಲ್ಲಿವರೆಗೆ ಎಷ್ಟು ಜನರಿಗೆ ಸಾಲ ಕೊಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ವಾದಿ ಏನು ವ್ಯವಹಾರ ಮಾಡುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಲೇವಾದೇವಿ ವ್ಯವಹಾರ ಮಾಡಲು ವಾದಿಗೆ ಪರವಾನಿಗೆ ಇರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಯಾವುದೇ ಪರವಾನಿಗೆ ಪಡೆಯದೆ ಲೇವಾದೇವಿ ವ್ಯವಹಾರ ಮಾಡುತ್ತಿದ್ದು, ಅವರಿಗೆ ಸಹಾಯ ಮಾಡಲು ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಿನಾಂಕ 22.03.2021 ರಂದು ಪ್ರತಿವಾದಿ ರೂ.4 ಲಕ್ಷ ಸಾಲವನ್ನು ವಾದಿಯಿಂದ ಪಡೆದಿಲ್ಲ ಹಾಗೂ ವಾದಿಯ ಪರವಾಗಿ ನಿ.ಪಿ.- 1 ಮತ್ತು 2 ರ ದಾಖಲೆಗಳನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳಲ್ಲಿ ನನ್ನ ಸಹಿಗಳು ಇಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ನನ್ನ ಹೆಸರು ಅಥವಾ ನನ್ನ ತಂದೆಯ ಹೆಸರು ಮತ್ತು ವಿಳಾಸ ನಮೂದಾಗಿಲ್ಲ ಎಂದರೆ ಸರಿ. ಸದರಿ ವಿವರವನ್ನು ಯಾಕೆ ನಮೂದಿಸಿಲ್ಲ ಎಂದು ನಾನು ವಾದಿಗೆ ಕೇಳಿಲ್ಲ. ಸದರಿ ಸಹಿ ನನ್ನದಲ್ಲ ಹಾಗಾಗಿ ನನ್ನ ಯಾವುದೇ ವಿವರ ಬರೆದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುವುದನ್ನೇ ವೃತ್ತಿ ಮಾಡಿಕೊಂಡಿದ್ದೇನೆ ಎಂದರೆ

ಸರಿಯಲ್ಲ. ನಿ.ಪಿ.–1(ಬಿ) ಮತ್ತು 2(ಬಿ) ಎಂದು ಗುರುತಿಸಲಾಗಿರುವ ಸಹಿಗಳು ನನ್ನದಲ್ಲ ಹಾಗೂ ಸದರಿ ಸಹಿಗಳನ್ನು ಮಾಡಿರುವ ವ್ಯಕ್ತಿ ನಾನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**